# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ.26865/2010

| | |
|---|---|
| ಸಾಕ್ಷಿದಾರರ ಹೆಸರು : | ಶ್ರೀನಿವಾಸ ಎಸ್. |
| ತಂದೆಯ ಹೆಸರು : | ಸಿದ್ದೇಗೌಡ |
| ವಯಸ್ಸು : | 46 ವರ್ಷ |
| ಉದ್ಯೋಗ : | ಪೊಲೀಸ್ ಮುಖ್ಯ ಪೇದೆ, ತಿಲಕ್ ನಗರ ಪಿ.ಎಸ್. |
| ವಾಸ : | ತಲಘಟಪುರ, ಬೆಂಗಳೂರು. |

**ದಿನಾಂಕ 13/02/2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**
**ದಂ.ಪ್ರ.ಸಂ.ಕಲಂ. 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ**

1. ಜುಲೈ-2022 ರಿಂದ ಇಲ್ಲಿಯವರೆಗೆ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದ ಆರೋಪಿಯ ವಿರುದ್ದ ಉದ್ಘೋಷಣೆ ಮಾಡುವಂತೆ ನ್ಯಾಯಾಲಯದಿಂದ ಆದೇಶ ಬಂದಿದ್ದು. ಠಾಣಾಧಿಕಾರಿಯವರು ಉದ್ಘೋಷಣೆ ಮಾಡುವಂತೆ ನನಗೆ ನಿಯೋಜಿಸಿರುತ್ತಾರೆ.

2. ಅದರಂತೆ ದಿನಾಂಕ 17/10/2023 ರಂದು ಆರೋಪಿಯ ವಿಳಾಸಃ ಅವಳಹಳ್ಳಿ, ಅಂಜನಾಪುರ ಅಂಚೆ, ಕನಕಪುರ ರಸ್ತೆ, ಕೋಣನಕುಂಟೆ ಕ್ರಾಸ್, ಬೆಂಗಳೂರು ಇಲ್ಲಿಗೆ ಹೋಗಿ ಆರೋಪಿಯ ಬಗ್ಗೆ ವಿಚಾರಿಸಿದಾಗ ಯಾವುದೇ ಮಾಹಿತಿ ದೊರೆಯಿಲಿಲ್ಲ. ಪಂಚರಾದ ಸಿರಾಜ್ ಖಾನ್ ಮತ್ತು ನಾಜೀಮ್ ಪಾಷಾ ಎಂಬುವವರನ್ನು ಕರೆಯಿಸಿ ಅವರ ಸಮಕ್ಷಮ ಸ್ಥಳದಲ್ಲಿ ಸದರಿ ಆರೋಪಿಯ ವಿರುದ್ದ ಉದ್ಘೋಷಣೆಯನ್ನು ಘೋಷಿಸಿ ಸದರಿ ಆರೋಪಿಯು ಕಂಡು ಬಂದಲ್ಲಿ ಹಾಗೂ ಆತನ ಮಾಹಿತಿ ತಿಳಿದಲ್ಲಿ ಕೂಡಲೇ ನ್ಯಾಯಾಲಯಕ್ಕಾಗಲೀ ಅಥವಾ ತಿಲಕ್ ನಗರ ಪೊಲೀಸ್ ಠಾಣೆಗೆ ತಿಳಿಸಬೇಕೆಂದು

ಸಾರ್ವಜನಿಕವಾಗಿ ಧ್ವನಿವರ್ಧಕದ ಮುಖಾಂತರ ಕೂಗಿ ಹೇಳಿ ಘೋಷಿಸಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ಅವಳಹಳ್ಳಿ ಬಸ್ ನಿಲ್ದಾಣದ ಗೋಡೆಗೆ, ವಿದ್ಯುತ್ ಕಂಬಕ್ಕೆ ಮತ್ತು ಮಸೀದಿಯ ಗೋಡೆಗೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ. ಸ್ಥಳದಲ್ಲಿ ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವೆರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ತಯಾರಿಸಿ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಉದ್ಘೋಷಣೆಯ ಆದೇಶ ಮತ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ **ಉದ್ಘೋಷಣೆಯ ಆದೇಶವನ್ನು ನಿಪಿ-6 ಎಂದು, ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-7 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)

ಮು.ಮ.ದಂ.ನ್ಯಾ.ಬೆಂ.ನಗರ.